ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ತರೀಕೆರೆ.

ಸಿ.ಸಿ. ಸಂಖ್ಯೆಃ 34/2024

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ತರೀಕೆರೆ ಪೊಲೀಸ್‌ರವರಿಂದ

-ವಿರುದ್ಧ-

ಆರೋಪಿ/ತರು: - ಮಂಜುನಾಥ

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಪ್ರಕಾರ ಆರೋಪಿ/ತರ ಹೇಳಿಕೆ

ಪ್ರಃ1) ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃ

ಪ್ರಃ2) ಪ್ರಾ.ಸಾ-1 – ಚಂದ್ರ್ಯಾನಾಯ್ಕ, ನಿವೃತ್ತ ಶಿಕ್ಷಕರವರು ತಮ್ಮ ಸಾಕ್ಷ್ಯದಲ್ಲಿ ದಿಃ23.09.2023 ರಂದು ಮನೆಗೆ ಹಾಗೂ ಗೇಟಿಗೆ ನಾನು ನನ್ನ ಹೆಂಡತಿ ನನ್ನ ಮಗಳ ಮನೆ ಹೊಸದುರ್ಗಕ್ಕೆ ಹೋಗಿ ದಿಃ25.09.2023 ರಂದು ವಾಪಾಸ್ಸು ಮನೆಗೆ ಬಂದಾಗ ಗೇಟಿನ ಬೀಗ ಮುರಿದು ಹೋಗಿತ್ತು ಹಾಗೂ ಕಾಂಪೌಂಡಿನಲ್ಲಿ ಕಾರು ಇರಲಿಲ್ಲ ಅಲ್ಲದೇ ಮನೆಯ ಬಾಗಿತು ನೋಡಿದಾಗ ಬಾಗಿಲಿನ ಇಂಟರ್ ಲಾಕ್ ಕೂಡಾ ಮುರಿದು ಹೋಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ3) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಾವು ಒಳಗೆ ಹೋಗಿ ನೋಡಿದಾಗ ಹಾಲ್ ನಲ್ಲಿ ಎಲ್ಲಾ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು, ಗಾಡ್ರೆಜ್ ಓಪನ್ ಆಗಿತ್ತು, ಅದರಲ್ಲಿಟ್ಟಿದ್ದ 50,000/- ನಗದು, ಎರಡು ಬಂಗಾರದ ಉಂಗುರ, ಕಾಲು ಚೈನು, ಒಂದು ಬೆಳ್ಳಿಸರ, ಒಂದು ಬೆಳ್ಳಿಯ ಕಾಯಿನ್ ಮತ್ತು 7 ರೇಷ್ಮೆ ಸೀರೆಗಳು ಮತ್ತು ನನ್ನ ಕೆಲವು ಹೊಸ ಬಟ್ಟೆಗಳು ಕಳುವಾಗಿದ್ದವು, ಆ ಕಾರಣ ಪೊಲೀಸರಿಗೆ ನಿಪಿ-1 ರಂತೆ ದೂರು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:4) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ದಿನದಂದು ಪೊಲೀಸರು ನಾನು ತೋರಿಸಿದ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:5) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಕಳ್ಳತನವಾದ ವಸ್ತುಗಳ ಪೈಕಿ ಕಾರು, ಎರಡು ಬಂಗಾರದ ಉಂಗುರು, ಬೆಳ್ಳಿ ಚೈನು, ಬೆಳ್ಳಿ ಸರ ಮತ್ತು ಬೆಳ್ಳಿಯ ಕಾಯಿನ್ ಸಿಕ್ಕಿದ್ದು, ಉಡುಪಿ ಪೊಲೀಸರು ಕರೆ ಮಾಡಿದ ಮೇರೆಗೆ ನಾನು ಠಾಣೆಗೆ ಹೋಗಿ ಕಾರನ್ನು ಬಿಡಿಸಿಕೊಂಡಿದ್ದು ಹಾಗೂ ಉಳಿದ ವಸ್ತುಗಳನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:6) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಪೊಲೀಸರು ಕಳ್ಳತನ ಮಾಡಿದ ವ್ಯಕ್ತಿ ಕಲ್ಕಕೆರೆ ಮಂಜಾ ಎಂದು ತಿಳಿಸಿದ್ದು ಹಾಗೂ ಪೊಲೀಸ್ ಠಾಣೆಯಲ್ಲಿ ತೋರಿಸಿದ್ದು, ಕಾರನ್ನು ಬಿಡಿಸಿಕೊಳ್ಳುವಾಗ ನಂಬರ್ ಪ್ಲೇಟ್ ಬದಲಿ ಮಾಡಲಾಗಿದ್ದು, ಚಾಸಿ ಮತ್ತು ಇಂಜೀನ್ ನಂಬರ್ ಸಹಾಯದಿಂದ ಕಾರನ್ನು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:7) ಪ್ರಾ.ಸಾ-2 – ಪ್ರಕಾಶರವರು ಮತ್ತು ಪ್ರಾ.ಸಾ-3 – ಫಯಾಜ್ ಅಲಿ ಬೆಗ್ ರವರು ತಮ್ಮ ಸಾಕ್ಷ್ಯದಲ್ಲಿ 2023 ರ ಸೆಪ್ಟೆಂಬರ್ ತಿಂಗಳಿನಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ಬಗ್ಗೆ ಮಾಡಿರುವ ಪಂಚನಾಮೆಯ ವೇಳೆಯಲ್ಲಿ ಸದರಿ ಸಹಿ ಹಾಕಿದ್ದು, ಅವರ ಮನೆಯಿಂದ ಕಾರು, ಬಂಗಾರ ಮತ್ತು ಸ್ವಲ್ಪ ಹಣ ಕಳ್ಳತನವಾಗಿದೆ ಎಂದು ತಿಳಿದಿದ್ದು, ಚಾಸಾ-1 ರವರು ಕಳ್ಳತನವಾದ ಸ್ಥಳವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:8) ಪ್ರಾ.ಸಾ-4 – ದೇವರಾಜ್‌ರವರು ಮತ್ತು ಪ್ರಾ.ಸಾ-5– ನಾಗಾನಾಯ್ಕರವರು ತಮ್ಮ ಸಾಕ್ಷ್ಯದಲ್ಲಿ ಕಳೆದ ವರ್ಷ ನವೆಂಬರ್ ತಿಂಗಳಿನಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದು, ನಂತರ ಚಾಸಾ-1 ರವರ ಮನೆಗೆ ಕಳ್ಳತನದ ಬಗ್ಗೆ ಪಂಚನಾಮೆ

ಮಾಡಲು ಬಂದಾಗ ಕಳ್ಳತನ ಮಾಡಿದ ವ್ಯಕ್ತಿಯನ್ನು ತೋರಿಸಿ ನಮ್ಮ ಸಹಿ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ9) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆ ದಿನ ಪೊಲೀಸರು ಆರೋಪಿಯನ್ನು ಉಡುಪಿಯಿಂದ ಕರೆದುಕೊಂಡು ಬಂದಿದ್ದಾಗಿ ಹೇಳಿದ್ದು ಹಾಗೂ ಸ್ಥಳದಲ್ಲಿ ಬಂಗಾರ, ಬಟ್ಟೆ, ನಗದು ಮತ್ತು ಕಾರು ಕಳ್ಳತನ ಆಗಿದೆ ಎಂದು ಮಾಹಿತಿ ಸಿಕ್ಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ10) ಪ್ರಾ.ಸಾ-6–ದಿಲೀಪ್‌ರವರು ಮತ್ತು ಪ್ರಾ.ಸಾ-7–ನಾಗರಾಜರವರು ತಮ್ಮ ಸಾಕ್ಷ್ಯದಲ್ಲಿ ದಿಃ29.11.2023 ರಂದು ಒಂದು ಪಂಚನಾಮೆ ದಾಖಲೆಯನ್ನು ನೋಡುತ್ತಿದ್ದು ಅದರ ಮೇಲೆ ತನ್ನ ಸಹಿ ಇದ್ದು, ಸದರಿ ಸಹಿಗಳನ್ನು ಪೊಲೀಸರು ಕಳ್ಳತನದ ವಸ್ತುಗಳನ್ನು ಒಬ್ಬ ವ್ಯಕ್ತಿ ಹಾಜರುಪಡಿಸಿದಾಗ ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲು ಸಹಿ ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ11) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆ ವ್ಯಕ್ತಿ ಎರಡು ಉಂಗುರ ಮತ್ತು ಸ್ವಲ್ಪ ಬೆಳ್ಳಿ ವಸ್ತುಗಳನ್ನು ಹಾಜರುಪಡಿಸಿದ್ದು, ನಿಪಿ-8 ರಿಂದ 10 ರಲ್ಲಿ ತೋರಿಸುತ್ತಿರುವ ವಸ್ತುಗಳನ್ನೇ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ12) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ದಿನ ಜರುಗಿಸಲಾದ ಇನ್ನೊಂದು ಪಂಚನಾಮೆಗೆ ಆರೋಪಿಯು ಕಳ್ಳತನ ಮಾರಾಟ ಮಾಡಿದ ಸ್ಥಳದಲ್ಲಿ ಅಂದರೆ ಭದ್ರಾವತಿ ಎಪಿಎಂಸಿಯಲ್ಲಿ ಸಹಿ ಮಾಡಿದ್ದು, ಕಳ್ಳತನ ಮಾಡಿದ ವ್ಯಕ್ತಿಯೇ ಸ್ಥಳವನ್ನು ತೋರಿಸಿದ್ದು ಮತ್ತು ಫೋಟೊದಲ್ಲಿ ಆತನು ಸಹಾ ಇರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ13) ಪ್ರಾ.ಸಾ-8 – ಸಾಯಿರಾಮ, ಚಿನ್ನಾಬೆಳ್ಳಿ ಕೆಲಸದವರು ತಮ್ಮ ಸಾಕ್ಷ್ಯದಲ್ಲಿ ನವೆಂಬರ್ ತಿಂಗಳಿನಲ್ಲಿ ಪೊಲೀಸರು ಠಾಣೆಯಲ್ಲಿ ಆಭರಣಗಳನ್ನು ಪರೀಕ್ಷೆ ಮಾಡುವ ಸಮಯದಲ್ಲಿ

ನಾನು ಸಹಿ ಹಾಕಿದ್ದು ಅಲ್ಲದೇ ಆ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ಈಗಾಲೇ ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ14) ಪ್ರಾ.ಸಾ-9 – ಮಂಜುನಾಥ, ಕಂದಾಯ ಅಧಿಕಾರಿಗಳರವರು ತಮ್ಮ ಸಾಕ್ಷ್ಯದಲ್ಲಿ ದಿಃ12.12.2023 ರಂದು ತರೀಕೆರೆ ಪೊಲೀಸ್ ಠಾಣೆಯ ಅಧಿಕಾರಿಗಳ ಕೋರಿಕೆಯ ಮೇರೆಗೆ ಚಾಸಾ-1 ರವರ ಮನೆಗೆ ಸಂಬಂಧಿಸಿದ ದಾಖಲಾತಿಯನ್ನು ನಮ್ಮ ಕಛೇರಿಯ ಕಡತದಿಂದ ಪರಿಶೀಲಿಸಿ ದೃಢೀಕೃತ ನಕಲನ್ನು ಪೂರೈಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ15) ಪ್ರಾ.ಸಾ-10 – ಪುನೀತ್ ಕುಮಾರ್, ಎ ಎಸ್ ಐ, ಉಡುಪಿ ನಗರ ಠಾಣೆರವರು ತಮ್ಮ ಸಾಕ್ಷ್ಯದಲ್ಲಿ ಉಡುಪಿ ನಗರ ಠಾಣೆಯ ಪ್ರಕರಣ ಸಂಃ147/2023 ರಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ಚಾಸಾ-8 ರವರು ನನ್ನ ನೇತೃತ್ವದಲ್ಲಿ ಸಿಬ್ಬಂದಿಗಳನ್ನು ಒಳಗೊಂಡ ಒಂದು ತಂಡ ರಚಿಸಿ ಅದರಂತೆ ಕುಂಜಿಬೆಟ್ಟು ಏರಿಯಾ ಮತ್ತು ಉಡುಪಿ ನಗರ ವ್ಯಾಪ್ತಿಯಲ್ಲಿ ಸಿಸಿ ಟಿವಿ ಗಳನ್ನು ಪರಿಶೀಲನೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ16) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿಃ08.10.2023 ರಂದು ಕಳ್ಳತನವಾದ ಮನೆಯ ಹತ್ತಿರದಲ್ಲಿ ಮಾರುತಿ ಯಕೋ ಕಾರ್ ಅನುವ ಊನಾಸ್ಪದವಾಗಿ ನಿಂತಿದ್ದ ಬಗ್ಗೆ ಮಾಹಿತಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ17) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಕಾರಿನ ಬಗ್ಗೆ ವಿಚಾರಣೆ ನಡೆಸಿದಾಗ ದಿಃ31.10.2023 ರಂದು ನಾನು ಮತ್ತು ನನ್ನ ಸಿಬ್ಬಂಧಿ ಪತ್ತೆ ಕಾರ್ಯದಲ್ಲಿ ಇದ್ದಾಗ ಸಂಜೆ 4-30 ರ ಸುಮಾರಿಗೆ ಬ್ರಹ್ಮಾವರದ ಕಡೆಯಿಂದ ಉಡುಪಿ ಕಡೆಗೆ ಬರುತ್ತಿರುವುದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:18) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಕೂಡಲೇ ನಾನು ಮತ್ತು ಸಿಬ್ಬಂದಿ ಉಡುಪಿಯ ಬಲೈಪಾದಿ ಜಂಕ್ಷನ್ ಹತ್ತಿರ ಹೋಗಿ ಬ್ರಹ್ಮಾವರದ ಕಡೆಯಿಂದ ಬರುತ್ತಿರುವ ವಾಹನಗಳನ್ನು ವೀಕ್ಷಣೆ ಮಾಡುತ್ತಿರುವಾಗ ಬಂದ ಮಾಹಿತಿಯಂತೆ ಸದರಿ ಕಾರಿನ ಮುಂಬದಿಯ ಗ್ಲಾಸ್ ಮತ್ತು ಎರಡೂ ಬದಿಯಲ್ಲಿ ತರಚಿದ ಗುರುತುಗಳು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:19) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಕಾರಿನಲ್ಲಿ ಒಬ್ಬ ಅಸಾಮಿ ಮಾತ್ರ ಇದ್ದನು, ಅದರ ನಂಬರ್ ಪ್ಲೇಟ್ ನ್ನು ನೋಡಿದಾಗ ಕೆಎ-26/ಎನ್ 4539 ಎಂದು ಬರೆಯಾಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:20) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ಆಸಾಮಿಯನ್ನು ವಿಚಾರಿಸಿದಾಗ ಆತ ಬೆಂಗಳೂರಿನ ನಿವಾಸಿ ಎಂದು ತಿಳಿಸಿದ್ದು, ಕಾರನ್ನು ಪರಿಶೀಲಿಸಿದಾಗ ಡಿಕ್ಕಿಯಲ್ಲಿ ಎರಡು ನಂಬರ್ ಪ್ಲೇಟುಗಳು ಇದ್ದವು, ಒಂದು ಬಿಳಿ ಬಣ್ಣದ ಚೀಲದಲ್ಲಿ ಬೆಳ್ಳಿಯಂತೆ ಕಾಣಿಸುವ ವಸ್ತುಗಳು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:21) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಅವುಗಳೊಂದಿಗೆ ಎರಡು ಕಬ್ಬಿಣದ ರಾಡುಗಳು ಕೂಡ ಇದ್ದವು, ಕಾರಿನ ಮುಂಭಾಗದ ಡ್ಯಾಶ್ ಬೋರ್ಡ್ ನಲ್ಲಿ ನೀಲಿ ಬಣ್ಣದ ವಸ್ತ್ರದಲ್ಲಿ ಚಿನ್ನದಂತೆ ಕಾಣಿಸುವ ಆಭರಣಗಳು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:22) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆಭರಣಗಳ ಬಗ್ಗೆ ವಿಚಾರಿಸಿದಾಗ ಆಸಾಮಿಯು ಅವುಗಳನ್ನು ಈ ಹಿಂದೆ ದಿ:08.10.2023 ರಂದು ಉಡುಪಿಯಲ್ಲಿ ಮನೆಕಳ್ಳತನ ಮಾಡಿದಾಗ ಸಿಕ್ಕ ಆಭರಣಗಳು ಎಂದು ತಿಳಿಸಿ ಅವುಗಳನ್ನು ಕೇರಳದಲ್ಲಿ ಮಾರಾಟ ಮಾಡಲು ಒಯ್ಯುತ್ತಿರುವುದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ:23) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಈಗಾಗಲೇ ಸಾಗರ ಮತ್ತು ಹೊಸನಗರದಲ್ಲಿ ಸ್ವಲ್ಪ ಆಭರಣಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಕಾರಿನ ಬಗ್ಗೆ ವಿಚಾರಿಸಿದಾಗ ಅದನ್ನು ತರೀಕೆರೆಯಿಂದ ಕಳುವು ಮಾಡಿಕೊಂಡು ಬಂದಿರುವುದಾಗಿ ತಿಳಿಸಿದ್ದು ಕೂಡಲೇ ಅವನನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದು ನನ್ನ ವರದಿಯೊಂದಿಗೆ ಚಾಸಾ-8 ರವರ ಮುಂದೆ ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:24) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-8 ರವರು ಆರೋಪಿಯನ್ನು ಹೆಚ್ಚಿನ ತನಿಖೆಗೆ ಒಳಪಡಿಸಿ ಠಾಣೆಯಲ್ಲಿ ಪಂಚರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಜರುಗಿಸಿ, ಸದರಿ ಪಂಚನಾಮೆಗೆ ಸಹಿ ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:25) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಪಂಚನಾಮೆಯ ಸಮಯದಲ್ಲಿ ಆರೋಪಿಯ ಕಡೆಯಿಂದ ಒಂದು ಮೊಬೈಲು, 28 ಬಂಗಾರದ ಒಡವೆಗಳು, 19 ಬೆಳ್ಳಿಯ ಸಾಮಾನಗಳು, ಎರಡು ಕಬ್ಬಿಣದ ರಾಡು, ಎರಡು ನಂಬರ್ ಪ್ಲೇಟುಗಳು ಮತ್ತು ಒಂದು ಕಾರನ್ನು ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:26) ಪ್ರಾ.ಸಾ-11 – ವೀರೇಂದ್ರರವರು ತಮ್ಮ ಸಾಕ್ಷ್ಯದಲ್ಲಿ ದಿ:25-09-2023 ರಂದು ಈ ಪ್ರಕರಣದ ಕಡತವನ್ನು ಚಾ.ಸಾ-20 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿ, ಭಾವಚಿತ್ರವನ್ನು ತೆಗೆಸಿದ್ದು ಅಲ್ಲದೇ ಅದೇ ದಿನ ಆರೋಪಿಗಳ ಪತ್ತೆಗಾಗಿ ಸಿಬ್ಬಂಧಿಗಳನ್ನು ನೇಮಕ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:27) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿ:21-11-2023 ರಂದು ಉಡುಪಿ ಪೊಲೀಸ್ ಠಾಣೆಯಿಂದ ಬಂದ ಮಾಹಿತಿ ಆಧಾರದ ಮೇರೆ ಆರೋಪಿಯ ವಿರುದ್ಧ

ಬಾಡಿ ವಾರಂಟ್ ಪಡೆದುಕೊಂಡು ಆತನನ್ನು ದಿ:27-11-2023 ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:28) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿ:28-11-2023 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡು, ಅದೇ ದಿನ ಕೃತ್ಯ ನಡೆದ ಸ್ಥಳದಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮ ಪಂಚನಾಮೆ ಜರುಗಿಸಿ, ಭಾವಚಿತ್ರ ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:29) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-1 ರವರ ಮನೆಯಿಂದ ಕಳ್ಳತನ ಮಾಡಿಕೊಂಡು ಹೋದ ಬಟ್ಟೆಗಳನ್ನು ಭದ್ರಾವತಿಯಲ್ಲಿ ಮಾರಾಟ ಮಾಡಿದ್ದ ಬಗ್ಗೆ ಮಾಹಿತಿ ಪಡೆದುಕೊಂಡು ಚಾಸಾ-11 ಮತ್ತು 12 ರವರ ಸಮಕ್ಷಮ ಪಂಚನಾಮೆ ಜರುಗಿಸಿ ವಶಕ್ಕೆ ಪಡೆದುಕೊಂಡಿದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:30) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿ:29-11-2023 ರಂದು ಆರೋಪಿ ಕಳ್ಳತನ ಮಾಡಿದ ವಸ್ತುಗಳನ್ನು ಚಾಸಾ 14 ರವರಿಗೆ ನೀಡಿದ ಬಗ್ಗೆ ಮಾಹಿತಿ ಕೊಟ್ಟ ಬಗ್ಗೆ ಆತನನ್ನು ಕರೆದು ವಿಚಾರಿಸಿ ಆತನು ಹಾಜರುಪಡಿಸಿದ ಒಡವೆಗಳನ್ನು ಚಾಸಾ11 ರಿಂದ 13 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಠಾಣಾ ಮಾಲುಪಟ್ಟಿ ಸಂಖ್ಯೆ 207/2023 ರಂತೆ ನೊಂದಾಯಿಸಿ, ಅದೇ ದಿನ ಚಾಸಾ-1 ರವರ ಮರು ಹೇಳಿಕೆ, ಚಾಸಾ14 ಮತ್ತು 15 ರವರ ಹೇಳಿಕೆಗಳನ್ನು ದಾಖಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರ:31) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿ:12-12-2023 ರಂದು ನಗರ ಸಭೆಯಿಂದ ಕೃತ್ಯ ಸ್ಥಳಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು ಉಡುಪಿ ನಗರ ಠಾಣೆಯಿಂದ ಚಾಸಾ-8 ರವರು ನನ್ನ ಸಿಬ್ಬಂದಿಯ ಮೂಲಕ ಕಳುಹಿಸಿಕೊಟ್ಟ

ದಾಖಲೆಗಳನ್ನು ಪರಿಶೀಲನೆ ಮಾಡಿ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ32) ಪ್ರಾ.ಸಾ-12 – ಉಮೇಶ್ ಆರ್ ರವರು ತಮ್ಮ ಸಾಕ್ಷ್ಯದಲ್ಲಿ ಸುಮಾರು ವರ್ಷದ ಹಿಂದೆ ಆರೋಪಿ ಕಾರಿನಲ್ಲಿ ನಮ್ಮ ಊರಿಗೆ ಬಂದು ಚಾಸಾ-15 ಇವರ ಬಗ್ಗೆ ವಿಚಾರ ಮಾಡಿದ್ದು, ನಾನು ಸಂಜು ಈತನನ್ನು ಕರೆಸಿದಾಗ ಇಬ್ಬರೂ ನಮ್ಮ ಮನೆಯಲ್ಲಿ ಸ್ವಲ್ಪ ಹೊತ್ತು ಮಾತನಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ33) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆರೋಪಿ ನನ್ನನ್ನು ಮತ್ತು ಚಾಸಾ-15 ಇವರನ್ನು ಹಣ ಸಹಾಯ ಮಾಡುವಂತೆ ಕೇಳಿದಾಗ ನಾವು ದುಡ್ಡು ಇಲ್ಲ ಎಂದು ಹೇಳಿದ ಕಾರಣ ಎರಡು ಬಂಗಾರದ ಉಂಗುರ ಮತ್ತು ಬೆಳ್ಳಿಯ ಚೈನು ಕೊಟ್ಟು ಒತ್ತೆ ಇಟ್ಟು ಹಣ ಕೊಡಿಸುವಂತೆ ಕೇಳಿದ್ದು ಆಗ ನಮಗೆ ಅನುಮಾನ ಬಂದ ಕಾರಣ ನಾನು ಹಣವನ್ನು ಕೊಡಿಸಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ34) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಒಂದು ತಿಂಗಳ ನಂತರದಲ್ಲಿ ತರೀಕೆರೆಯ ಪೊಲೀಸರು ನನಗೆ ಈ ಬಗ್ಗೆ ಪೋನ್ ಮಾಡಿ ವಿಚಾರಿಸಿದ್ದು, ಪೊಲೀಸರು ಕೇಳಿದ ಕಾರಣಕ್ಕೆ ಆರೋಪಿಯು ನನಗೆ ಕೊಟ್ಟಿದ್ದ ಉಂಗುರಗಳು ಮತ್ತು ಚೈನನ್ನು ಪೊಲೀಸರಿಗೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ35) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಪೊಲೀಸರು ಸದರಿ ವಸ್ತುಗಳನ್ನು ಆರೋಪಿ ತರೀಕೆರಯಲ್ಲಿಯೇ ಕಳುವು ಮಾಡಿದ್ದಾನೆ ಎಂದು ತಿಳಿಸಿದ್ದು, ನಾನು ಠಾಣೆಗೆ ಬಂದಾಗ ಆರೋಪಿ ಕೂಡ ಅಲ್ಲಿಯೇ ಇದ್ದ, ಪೊಲೀಸರು ಆತನನ್ನು ಉಡುಪಿಯಿಂದ ಕರೆತಂದಿದ್ದೇವೆ ಎಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ36) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಿ.ಪಿ-8 ರಿಂದ 10 ರಲ್ಲಿ ಕಾಣುವ ವಸ್ತುಗಳನ್ನೇ ನಾನು ಪೊಲೀಸರ ಮುಂದೆ ಹಾಜರು ಮಾಡಿದ್ದು, ನಂತರದಲ್ಲಿ ಕಾರನ್ನು

ಕೂಡ ಆರೋಪಿ ತರೀಕೆರೆಯಿಂದ ಕಳ್ಳತನ ಮಾಡಿಕೊಂಡು ಹೋಗಿದ್ದಾನೆ ಎಂದು ಗೊತ್ತಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ37) ಪ್ರಾ.ಸಾ-13 – ಮಂಜಪ್ಪ, ಸಿ ಪಿ ಐ ಕಾರ್ಕಳ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 09-10-23 ರಂದು ನಗರ ಪೊಲೀಸ್ ಠಾಣಾ ಗುನ್ನಾ ನಂ.147 /23 ರ ಪ್ರಕರಣದ ಕಡತವನ್ನು ಚಾಸಾ-4 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ ತನಿಖೆಯನ್ನು ಮುಂದುವರೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ38) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಪ್ರಕರಣದಲ್ಲಿ ಕಳ್ಳತನವಾದ ವಸ್ತುಗಳು ಮತ್ತು ಆರೋಪಿಯ ಪತ್ತೆಗಾಗಿ ಚಾಸಾ-5 ಮತ್ತು ಇತರೆ 6 ಸಿಬ್ಬಂದಿಗಳೊಂದಿಗೆ ಒಂದು ವಿಶೇಷ ತನಿಖಾ ತಂಡವನ್ನು ರಚಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ39) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 31-10-23 ರಂದು ಚಾಸಾ-5 ರವರು ಒಬ್ಬ ಆಸಾಮಿ ಮತ್ತು ಆತನಿಂದ ವಶಪಡಿಸಿಕೊಂಡ ಒಂದು ಕಾರು ಹಾಗೂ ವಿವಿದ ಸ್ಥಳಗಳಲ್ಲಿ ಕಳ್ಳತನ ಮಾಡಿದ ಬಂಗಾರ ಮತ್ತು ಬೆಳ್ಳಿ ವಸ್ತುಗಳನ್ನು ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ40) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆ ಪ್ರಕಾರ ಆರೋಪಿಯನ್ನು ಹೆಚ್ಚಿನ ತನಿಖೆಗೆ ಒಳಪಡಿಸಿ ಆತನ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು ಕಡತಕ್ಕೆ ಅಳವಡಿಸಿ, ಅದೇ ದಿನ ಠಾಣೆಯಲ್ಲಿ ಆರೋಪಿಯ ಬಳಿ ಇದ್ದ ಒಡವೆಗಳನ್ನು ಕೃತ್ಯಕ್ಕೆ ಬಳಸಿದ ಕಾರು ಸಹಿತ ಪಂಚನಾಮೆ ಜರುಗಿಸಿ ನನ್ನ ವಶಕ್ಕೆ ಪಡೆದು ಮತ್ತು ಆ ಬಗ್ಗೆ ಪಿ ಎಫ್ ವರದಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ41) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆರೋಪಿ ತನಿಖಾ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಕಾರನ್ನು ತರೀಕೆರೆ ನಗರದಿಂದ ಕಳ್ಳತನ ಮಾಡಿ

ತಂದಿರುವುದಾಗಿ ಒಪ್ಪಿಕೊಂಡ ಕಾರಣ ಸದರಿ ಕಾರನ್ನು ಪರಿಶೀಲನೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ42) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ತರೀಕೆರೆ ಪೊಲೀಸ್ ಠಾಣೆಗೆ ಸದರಿ ಘಟನೆ ಬಗ್ಗೆ ಮಾಹಿತಿ ನೀಡಿ ದಸ್ತಗಿರಿ ನಿಯಮ ಅನುಸರಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿ, ನಮ್ಮ ಕೇಸಿಗೆ ಸಂಬಂಧಿಸಿದ ದಾಖಲಾತಿಗಳನ್ನು ತರೀಕೆರೆ ಪೊಲೀಸ್ ಠಾಣೆಗೆ ದಿಃ02-11-2023 ರಂದು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ43) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 05-12-23 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಕಾರನ್ನು ಚಾಸಾ-1 ರವರ ಮಧ್ಯಂತರ ವಶಕ್ಕೆ ಬಿಟ್ಟು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ44) ಪ್ರಾ.ಸಾ-14 – ಸಂಜಯ್ ರವರು ತಮ್ಮ ಸಾಕ್ಷ್ಯದಲ್ಲಿ ಕಳೆದ ವರ್ಷ ಆರೋಪಿ ಚಾಸಾ-14 ರವರ ಮನೆಗೆ ಬಂದು ಅವರಿಗೆ ದುಡ್ಡಿನ ಸಹಾಯ ಮಾಡುವಂತೆ ಕೇಳಿದ್ದು, ಅದಕ್ಕೆ ಚಾಸಾ-14 ರವರು ನನ್ನ ಬಳಿ ದುಡ್ಡು ಇಲ್ಲ ಎಂದು ಹೇಳಿದಾಗ ಆರೋಪಿ ತನ್ನ ಬಳಿ ಇರುವ ಬಂಗಾರ ಮತ್ತು ಬೆಳ್ಳಿಯ ವಸ್ತುಗಳನ್ನು ಅಡವಿಟ್ಟು ಹಣ ಕೊಡಿಸುವಂತೆ ಕೇಳಿದಾಗ ಚಾಸಾ-14 ರವರು ಒಪ್ಪಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ45) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆಗ ಆರೋಪಿ ಒಡವೆಗಳು ನಿನ್ನ ಬಳಿಯೇ ಇರಲಿ ನಂತರದಲ್ಲಿ ಬಂದು ತೆಗೆದುಕೊಂಡು ಹೋಗುತ್ತೇನೆಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ46) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆದರೆ ಒಂದು - ಎರಡು ತಿಂಗಳ ನಂತರದಲ್ಲಿ ತರೀಕೆರೆಯ ಪೊಲೀಸರು ನನಗೆ ಫೋನ್ ಮಾಡಿದ ಕಾರಣ ನಾನು ಚಾಸಾ-14 ರವರ ಮನೆಗೆ ಬಂದಿದ್ದು, ಅಲ್ಲಿಗೆ ಪೊಲೀಸರು ಬಂದು ಚಾಸಾ-14 ರವರ ಬಳಿಯಿದ್ದ

ಆರೋಪಿಯು ನೀಡಿದ್ದ ಬೆಳ್ಳಿಯ ವಸ್ತುಗಳು ಮತ್ತು ಅಭರಣಗಳನ್ನು ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ47) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ವಸ್ತುಗಳನ್ನು ಆರೋಪಿಯು ತರೀಕೆರೆಯ ಯಾವುದೋ ಒಂದು ಮನೆಯಿಂದ ಕಳ್ಳತನ ಮಾಡಿಕೊಂಡು ತಂದಿದ್ದಾನೆಂದು ಗೊತ್ತಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ 48) ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುದೇನಾದರೂ ಇದೆಯೇ?

ಉಃ

ಪ್ರ 49) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉಃ

(ಈ ಮೇಲ್ಕಂಡ ಹೇಳಿಕೆಯನ್ನು ನಾನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸಿದ್ದೇನೆ.

ದಿನಾಂಕ ಃ 15.10.2024

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ತರೀಕೆರೆ.